## ಕರ್ನಾಟಕ ಸರ್ಕಾರ

ಸಂಖ್ಯೆ: ಸಕನಿ/ಸಿಬ್ಬಂದಿ-11/ಸಿಆರ್-17/2016-17

ಸಮಾಜ ಕಲ್ಯಾಣ ಆಯುಕ್ತರ ಕಛೇರಿ,
5ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 19-11-2016.

ಎಲ್ಲಾ ಜಿಲ್ಲಾಧಿಕಾರಿಗಳು,

ಎಲ್ಲಾ ಜಿಲ್ಲೆಗಳ ಜಂಟಿ ನಿರ್ದೇಶಕರು/ಉಪ ನಿರ್ದೇಶಕರುಗಳು,
ಸಮಾಜ ಕಲ್ಯಾಣ ಇಲಾಖೆ.

ಮಾನ್ಯರೇ,

ವಿಷಯ:- ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ 885 ಅಡುಗೆ ಸಹಾಯಕರ ಗ್ರೂಪ್-ಡಿ ವೃಂದದ ಹುದ್ದೆಗಳನ್ನು ಮತ್ತು 879 ಕಾವಲುಗಾರರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಆಯ್ಕೆ ಪ್ರಕ್ರಿಯೆಗೆ ನಿಗಧಿಪಡಿಸಲಾಗಿದ್ದ ವೇಳಾ ಪಟ್ಟಿಯನ್ನು ವಿಸ್ತರಿಸುವ ಕುರಿತು.

ಉಲ್ಲೇಖ:- ಸರ್ಕಾರದ ಪರಿಷ್ಕೃತ ಆದೇಶ ಸಂಖ್ಯೆ:ಸಕಇ:268 ಪಕಸೇ 2015, ದಿನಾಂಕ:19.11.2016

********

ಸರ್ಕಾರದ ಆದೇಶ ಸಂಖ್ಯೆ: ಸಕಇ 268 ಪಕಸೇ 2015 ದಿನಾಂಕ: 29.09.2016 ರ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಅಡುಗೆ ಸಹಾಯಕರು / ಕಾವಲುಗಾರರ ಹುದ್ದೆಗಳಿಗೆ ನೇರ ನೇಮಕಾತಿ ಆಯ್ಕೆ ಪ್ರಕ್ರಿಯೆಗೆ ನಿಗಧಿಪಡಿಸಲಾಗಿದ್ದ ವೇಳಾ ಪಟ್ಟಿಯನ್ನು ಉಲ್ಲೇಖದ ಆದೇಶದಲ್ಲಿ ವಿಸ್ತರಿಸಿ ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ. (ಪ್ರತಿ ಲಗತ್ತಿಸಿದೆ)

| ಕ್ರ. ಸಂ | ಆಯ್ಕೆ ಪ್ರಕ್ರಿಯೆಗೆ ನಿಗಧಿಪಡಿಸಲಾದ ಹಂತಗಳು | ದಿ:29-09-2016 ರ ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಲಾಗಿದ್ದ ವೇಳಾಪಟ್ಟಿ | ವಿಸ್ತರಿಸಲಾದ ಪರಿಷ್ಕೃತ ವೇಳಾಪಟ್ಟಿ |
|---|---|---|---|
| 1. | ನೇಮಕಾತಿ ಅಧಿಸೂಚನೆ ಹೊರಡಿಸುವುದು | 20.10.2016 | - |
| 2. | ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | 19.11.2016 | 30.11.2016 |
| 3. | ದಾಖಲಾತಿ ಪರಿಶೀಲನೆ ಹಾಗೂ ಅರ್ಹ ಅಭ್ಯರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆ ನಡೆಸುವುದು. | 25.11.2016 ರಿಂದ 09.12.2016 | 08.12.2016 ರಿಂದ 22.12.2016 |
| 4. | ತಾತ್ಕಾಲಿಕ ನೇಮಕಾತಿ ಪಟ್ಟಿ (Provisional List) ಪ್ರಕಟಿಸುವುದು | 17.12.2016 | 30.12.2016 |

| | | | |
|---|---|---|---|
| 5. | ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ | 30.12.2016 | 12.01.2017 |
| 6. | ಆಕ್ಷೇಪಣೆಗಳಿಗೆ ಸೂಕ್ತ ಸಮಜಾಯಿಷಿ ನೀಡಲು ಕೊನೆಯ ದಿನಾಂಕ | 01.01.2017 | 13.01.2017 |
| 7. | ಅಂತಿಮ ನೇಮಕಾತಿ ಪಟ್ಟಿ ಪ್ರಕಟಿಸುವುದು | 02.01.2017 ರ ಸಂಜೆ 5.30 ಗಂಟೆಗೆ | 16.01.2017 ರ ಸಂಜೆ 5.30 ಗಂಟೆಗೆ |
| 8. | ಅಂಚೆ ಕಛೇರಿಯಲ್ಲಿ ಶುಲ್ಕ ಪಾವತಿಗಾಗಿ ಕೊನೆಯ ದಿನಾಂಕ | 21.11.2016 | 01.12.2016 |

ಆದುದ್ದರಿಂದ ದಿನಾಂಕವನ್ನು ವಿಸ್ತರಿಸಿ ಪರಿಷ್ಕರಿಸಿ ಆದೇಶಿಸಿರುವಂತೆ ಆಯಾ ಜಿಲ್ಲೆಯ, ಉಪ ನಿರ್ದೇಶಕರು/ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರುಗಳು ಜಿಲ್ಲಾ ಹಂತದಲ್ಲಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲು ಅಗತ್ಯ ಕ್ರಮ ವಹಿಸುವಂತೆ ತಿಳಿಸಲಾಗಿದೆ.

ತಮ್ಮ ನಂಬುಗೆಯ,

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು